ಪಕ್ಷಿಗಳು ಖುಷಿಯಿಂದ ಇದ್ದವು. ಮಕ್ಕಳು ತಾವು ತಿನ್ನುವ ಮುಂಚೆ ಇರುವೆ, ಕೋತಿಗಳಿಗೆ ರೊಟ್ಟಿ, ಚಪಾತಿ, ಬ್ರೆಡ್ ಹಾಕುತ್ತಿದ್ದರು. ನಾವೂ ಕೂಡ ಹಾಗೇ ಮಾಡುತ್ತಿದ್ದೆವು. ಇದು ನಮಗೆಲ್ಲಾ ತುಂಬಾ ಖುಷಿ ಕೊಡುತ್ತಿತ್ತು. ಆದರೆ, ನಮ್ಮ ಅಭಿ ಮಾತ್ರ ಮಂಗಗಳಿಗೆ ತೊಂದರೆ ಕೊಟ್ಟು ನಮ್ಮಿಂದ ಪ್ರತಿಬಾರಿ ಬೈಸಿಕೊಳ್ಳುತ್ತಿದ್ದ.

ನಮ್ಮ ನಮ್ಮಲ್ಲಿ ತಂದ ಊಟವನ್ನೆಲ್ಲಾ ಒಬ್ಬರಿಗೊಬ್ಬರು ಹಂಚಿಕೊಂಡು ತಿನ್ನುತ್ತಿದ್ದೆವು. ನಾನು ಮುಚ್ಚಳ ತೆಗೆದು 'ದೋಸೆ' ಎಂದೆ. ಅಭಿ ಗಬಕ್ಕನೆ ಎರಡು ತುತ್ತು ಬಾಯಿಗೆ ಹಾಕೊಳ್ತಾ ಉಪ್ಪಿಟ್ಟು ತೋರಿಸಿದ. 'ನಂದು ವೆಜಿಟೇಬಲ್ ಪಲಾವ್' ಎಂದ ಅಖಿಲ್. 'ನಂದೂ ಅದೇ, ಆದರೆ ಅದರಲ್ಲಿ ಪೀಸ್‌ಗಳು ಇವೆ'. ಮುನ್ನಿ ತನ್ನ ಬಟ್ಟಲನ್ನು ಅಖಿಲನ ಮೂತಿಯ ಹತ್ತಿರ ತಂದಳು. ಅವನು ಏಕ್‌ಧಂ ಗಾಬರಿಯಾಗಿ ಹಿಂದೆ ಸರಿದು, 'ಛೀ ಮುನ್ನಿ, ನಿನಗೆಷ್ಟು ಸಲ ಹೇಳೋದು, ಕ್ಲಾಸಿಗೆ ನಾನ್‌ವೆಜ್ ತರಬೇಡ ಅಂತ' ಎಂದು ಗದರಿದ. ಎಲ್ಲಾ ವಿಷಯಗಳಲ್ಲೂ ನಮ್ಮ ಟೀಮಿನಲ್ಲಿರುವ ಅಖಿಲ್‌ನನ್ನು ಇದೊಂದರಲ್ಲಿ ಒಪ್ಪಿಸಲು ನಮ್ಮಿಂದ ಆಗಿರಲಿಲ್ಲ. ಅಖಿಲ್ ಮಾತ್ರ ಯಾರೊಂದಿಗೂ ತನ್ನ ಊಟ ಹಂಚಿಕೊಳ್ಳುತ್ತಿರಲಿಲ್ಲ.

ನನಗೆ ತುಂಬಾ ಸಿಟ್ಟು ಬಂತು. 'ಹೇ ಹೋಗೋ, ನೀನು ತಂದಿದ್ದೆಲ್ಲಾ ನೀನೊಬ್ಬನೇ ತಿಂದು ಮುಗಿಸು, ಬೇಡ ಅನ್ನೋರಿಲ್ಲ. ಆದರೆ, ಮುನ್ನಿ ಬಿರಿಯಾನಿ ಬಗ್ಗೆ ಮಾತ್ರ ಮಾತಾಡಬೇಡ.' ಗದರಿದೆ. ಅವನು, 'ಶ್ರಾವಣಿ, ನೀನು ಬೇಕಾದರೆ ಅವಳು ತಂದ ಮೂಳೆ ಕಡಿದು ಪುಡಿ ಪುಡಿ ಮಾಡು, ನನಗೇನೂ ತೊಂದರೆಯಿಲ್ಲ. ಆದರೆ, ನನಗೆ ಮಾತ್ರ ಆ ವಾಸನೆ ಕಂಡ್ರೆ ಆಗಲ್ಲ, ಗೊತ್ತಲ್ವಾ ?' ಎಂದು ಸಿಟ್ಟು ಮಾಡಿಕೊಂಡ. ಅಭಿ ಮುಖ ನೋಡಿದೆ. ಅವನು, 'ಹೂಂ ಕಣೋ, ನನಗೂ ಆಗಲ್ಲಪ್ಪಾ. ಹೇ ಮುನ್ನಿ, ನೀನು ಇನ್ನೊಮ್ಮೆ ಶಾಲೆಗೆ ಈ ಮೂಳೆ ಗೀಳೆ ಎಲ್ಲಾ ತರಬೇಡ ತಿಳಿತಾ...' ಎನ್ನುತ್ತಲೇ ತನ್ನ ಬಾಕ್ಸಿನ ಮುಚ್ಚಳ ಆ ಕಡೆ ತಳ್ಳಿ/ಎರಡೇ ಎರಡು ಚಮಚ ರೈಸ್ ಸಾಕು, ಮೂಳೆ ಮಾತ್ರ ಬೇಡಪ್ಪಾ, ಬೋನ್‌ಲೆಸ್ ಇದ್ದರೆ ಅಷ್ಟೇ ಹಾಕು' ಎಂದ.

ಮುನ್ನಿ ಮಾತ್ರ ಏನೇನೂ ಕೋಪ ಮಾಡಿಕೊಳ್ಳದೆ, 'ಏ ಅಖಿಲ್ ನಿನಗೆ ಇದೆಲ್ಲಾ ಇಷ್ಟವಿಲ್ಲ ಅಂತ ನನಗೊತ್ತು ಕಣೋ. ನಮ್ಮೇನಿಲಿ ಪ್ರತಿ ಶುಕ್ರವಾರ ಸಹಜವಾಗಿ ಮಾಂಸದ ಅಡುಗೆ ಮಾಡ್ತಾರೆ. ಅದು ನಮಗೆ ಅಭ್ಯಾಸ, ನಾನೇನ್ ಮಾಡ್ಲಿ ಹೇಳು?' ಎನ್ನುತ್ತಾ, ಅವಳೇ ಮುಂದುವರೆಸಿ – 'ನಾನು ನಿಮಗೆ ಸಮಸ್ಯೆ ಆಗಬಾರದು ಅಂತ ದೈವದ ಕಟ್ಟೆ ಮೇಲೆ ಕುಂತು ಯಾವತ್ತೂ ಮಾಂಸ ತಿನ್ನಲ್ಲ' ಎನ್ನುತ್ತಾ ಅಭಿಗೆ ತನ್ನ ಊಟದ ತಟ್ಟೆ ನೀಡಿದಳು. ಅಭಿ ಏಕ್‌ಧಂ ಕಟ್ಟೆ ಕೆಳಗಿನ ಬಿಳಿ ಬಂಡೆ ಮೇಲೆ ಕೂತು ತಿಂದು ಮುಗಿಸಿದ. ಈ ಮಧ್ಯ ನಾನು ಅವಳ ಬಟ್ಟಲಿನಿಂದ ಎರಡು ಪೀಸ್ ಚಪ್ಪರಿಸೋದಕ್ಕೆ ಅಭಿ ಪಕ್ಕ ಹೋದೆ.

ಈ ಜಗಳ ದಿನವೂ ಇದ್ದದ್ದೇ. ಹೀಗೆ ಅಂತೂ ಊಟ ಮುಗಿಸಿದೆವು.

ಮಧ್ಯಾಹ್ನದ ಎರಡು ಅವಧಿಗಳು ಮುಗಿದ ನಂತರದ ಆಟದ ಅವಧಿಯಲ್ಲಿ ನಾವು ನಾಲ್ಕು ಜನ ಸೇರಿ ಶಟಲ್ ಬ್ಯಾಡ್ಮಿಂಟನ್ ಆಡ್ತಾ ಇದ್ದೆವು. ಜೋಡಿ ಯಾರ್‍ಯಾರು ಅಂತೀರಿ..? ನಾನು ಮತ್ತು ಅಭಿ ಈ ಕಡೆಯಾದರೆ, ಆ ಕಡೆ ಅಖಿಲ್ ಮತ್ತು ಮುನ್ನಿ. ಅವರಿಬ್ಬರು ಸೇರಿದರೆ ಮುಗೀತು. ಯಾರೂ ಅವರನ್ನು ಸೋಲಿಸೋಕೆ ಆಗ್ತಿರಲಿಲ್ಲ. ಅಷ್ಟೊಂದು ಅಪರೂಪದ ಜೋಡಿ ಅವರದು. ಈಗಾಗಲೇ ಹಲವು ಪಂದ್ಯಾವಳಿಗಳಲ್ಲಿ ನಮ್ಮ ಎಸ್.ಎಸ್. ಹಿರಿಯ ಪ್ರಾಥಮಿಕ ಶಾಲೆಗೆ ಹೆಸರು ತಂದಿದ್ದರು. ಶ್ರೀ ಸಿದ್ಧಾರ್ಥ ಹಿರಿಯ ಪ್ರಾಥಮಿಕ ಶಾಲೆಯೆಂದರೆ ಓದಿನಲ್ಲಷ್ಟೇ ಅಲ್ಲದೇ ಆಟ, ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಇಡೀ ತಾಲ್ಲೂಕಿನಲ್ಲಿ ಒಳ್ಳೆಯ ಹೆಸರು ಇದೆ. ಇದಕ್ಕೂ ಈ ಜಗಳಗಂಟ ಜೋಡಿಯೇ ಕಾರಣ. ಇದೆಲ್ಲಾ ಓಕೆ. ಆದರೆ, ಈ ಊಟದ ವಿಷಯದಲ್ಲಿ ಮಾತ್ರ ಇವತ್ತಿನವರೆಗೂ ಒಮ್ಮತ ಬಂದಿರಲಿಲ್ಲ. ಆಟದಲ್ಲಿ ಎಂದಿನಂತೆ ನಾವೇ ಸೋತು ಬೇಲ್‌ಪುರಿ ಕೊಡಿಸಿ ಮನೆ ದಾರಿ ಹಿಡಿದೆವು.

ಈ ದಿನ ನಮಗೆ ತುಂಬಾ ವಿಶೇಷವಾದ ದಿನ. ನಮ್ಮ 'ಸೂಪರ್ ಫೋರ್' ತಂಡದ ನಾಯಕ ಅಖಿಲ್‌ನ ಹುಟ್ಟುಹಬ್ಬ. ನಮ್ಮ ಗುಂಪಿನಲ್ಲಿ ಯಾರದ್ದೇ ಹುಟ್ಟಿದ ದಿನವಾದರೂ ಎಲ್ಲರೂ ಶಾಲೆಯ ಪಕ್ಕದ ದೈವದ ಕಟ್ಟೆಯಲ್ಲಿ ಗೆಳೆಯರೊಂದಿಗೆ ಸೇರಿ ಹಾಡು, ಹರಟೆ, ನೃತ್ಯ, ಕಥೆ ಹೀಗೆ ಏನೇನೋ ಮನರಂಜನೆ ಮಾಡ್ತಾ ಹುಟ್ಟಿದಹಬ್ಬ ಆಚರಿಸಿಕೊಳ್ಳೋದು ಸಾಮಾನ್ಯವಾಗಿತ್ತು. ಇಂದೂ ಕೂಡ ಅಖಿಲ್‌ನ ಹುಟ್ಟುಹಬ್ಬ ಅಲ್ಲಿಯೇ ಆಗೋದಿತ್ತು.

ಇವತ್ತು ನಮಗೆಲ್ಲಾ ಇನ್ನೊಂದು ವಿಶೇಷ ದಿನ. ನಮ್ಮ ಮುನ್ನಿಯ ಮೆಚ್ಚಿನ ಹಬ್ಬಗಳಲ್ಲಿ ಒಂದಾದ